**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-143/2024 **PW**-1 **DW**-1

**ದಿಃ 15.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ರವರ ಪ್ರತಿವಾದಿ ಪರ ಎ ಎಚ್ ಬಿ ವಕೀಲರಿಂದಃ**

ನನ್ನ ದಾವಾ ಪತ್ರದಲ್ಲಿ ಪ್ರತಿವಾದಿ 1 Managing Director of HAWA Wales ಎಂಬುದಾಗಿ ಬರೆಸಿರುತ್ತೇನೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಪತ್ರದಲ್ಲಿ ಏನು ಬರೆಸಿದ್ದೇವೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಏನು ಬರೆಸಿದ್ದೇನೆಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ನನ್ನ ಯಜಮಾನರು ದಾವಾದ ಕ್ರಮ ಸಂಖ್ಯೆ 3 ರ ಆಸ್ತಿಯನ್ನು ಖರೀದಿ ಹಿಡಿದಿದ್ದಾರೆಂದು ಹೇಳಿದ್ದು ಅವರು ಯಾರಿಂದ ಎಷ್ಟು ಹಣಕ್ಕೆ ಖರೀದಿ ಹಿಡಿದಿದ್ದಾರೆಂದರೆ ಸಾಕ್ಷಿ ಗೀತಾಂಜಲಿ ಹೆರಿಟೇಜ ರವರ ಕಡೆಯಿಂದ ಖರೀದಿ ಹಿಡಿದಿದ್ದಾರೆಂಬುದು ಗೊತ್ತು ಆದರೆ ಎಷ್ಟು ಹಣಕ್ಕೆ ಮತ್ತು ಯಾರಿಂದ ಖರೀದಿ ಹಿಡಿದಿದ್ದಾರೆಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಯಜಮಾನರು ಅವರ ತಂದೆ ತೀರಿಕೊಂಡ ಒಂದು ವರ್ಷ ಒಂದು ತಿಂಗಳ ನಂತರ ಸದರಿ ಆಸ್ತಿಯನ್ನು ಖರೀದಿ ಹಿಡಿದಿದ್ದಾರೆಂದರೆ ಸಾಕ್ಷಿ ನನ್ನ ಯಜಮಾನರ ತಂದೆ ಇದ್ದಾಗಲೇ ಸದರಿ ಆಸ್ತಿ ಬುಕ್ ಆಗಿತ್ತು ಆದರೆ ಕಾಗದ ಪತ್ರಗಳು ಆಗಿದ್ದು ಅವರು ತೀರಿಕೊಂಡ ನಂತರ ಆಗಿರುತ್ತದೆ ಎನ್ನುತ್ತಾರೆ. ಆ ರೀತಿ ಸದರಿ ಆಸ್ತಿ ಮೊದಲೇ ಬುಕ್ಕ ಆಗಿತ್ತು ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲೆ ಏನೂ ಇಲ್ಲ ಆದರೆ ನನ್ನ ಗಂಡ ನನಗೆ ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ನನ್ನ ಗಂಡ ಹೇಳಿದ್ದು ಬಿಟ್ಟರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ಯಜಮಾನರು ನನ್ನನ್ನು ಮದುವೆಯಾಗುವದಕ್ಕಿಂತ ಮೊದಲು ಖರೀದಿ ಹಿಡಿದಿದ್ದಾರೆಂದರೆ ಸರಿ. ಪ್ರತಿವಾದಿ 2 ರವರ ತವರು ಮನೆಯವರು ಆರ್ಥಿಕವಾಗಿ ಸ್ಥಿತಿವಂತರು ಎಂದರ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ 2 ರವರ ಅಣ್ಣ ತಮ್ಮಂದಿರು ಕೂಡಾ ಇರುತ್ತಾರೆಂದರೇ ಸಾಕ್ಷಿ ಇದ್ದಾರೆ ಆದರೆ ಅದರ ಬಗ್ಗೆ ನನಗೇನೂ ಹೇಳಿಲ್ಲ ಎನ್ನುತ್ತಾರೆ. ಪ್ರತಿವಾದಿ 2 ರವರಾ ತವರು ಮನೆಯಲ್ಲಿ ವಾಟ್ನೀಯಾದಾಗ ಅವರ ಅಣ್ಣ ತಮ್ಮಂದಿರು ಸ್ತ್ರೀ ಧನ ಎಂಬುದಾಗಿ ಕೆಲವೊಂದು

ಆಸ್ತಿಯನ್ನು ಪ್ರತಿವಾದಿ 2 ರವರಿಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ಅವಬರು ಸ್ತ್ರೀಧನ ಆಸ್ತಿ ಕೊಟ್ಟಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಕೇಸಗೆ ಅನುಕೂಲವಾಗಲೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ನಿಮ್ಮ ಮಾವನವರು ವಾಲಂಟರಿ ರಿಟೈರಮೆಂಟ ಕೊಡುವ ಸಮಯದಲ್ಲಿ ಕೊಟ್ಟ ದಾಖಲೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮಾವನವರು ನೌಕರಿ ಮಾಡುತ್ತಿದ್ದರೋ ಇಲ್ಲವೋ ಎಂದರೆ ಸಾಕ್ಷಿ ನೌಕರಿ ಮಾಡುತ್ತಿದ್ದರು ಎನ್ನುತ್ತಾರೆ. ದಿನಾಂಕಃ 30.01.2008 ರಂದು ನನ್ನ ಮಾವ ತಮ್ಮ ನೌಕರಿಗೆ ವಾಲಂಟರಿ ರಿಟೈರಮೆಂಟ ಸಬ್‌ಮಿಟ ಮಾಡಿ ಸ್ವಯಂ ನಿವೃತ್ತಿ ಆದರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ 1 ನ್ನು ನನ್ನ ಮಾವನವರು ತಮ್ಮ ಸ್ವಂತ ಗಳಿಕೆಯಿಂದ ಖರೀದಿ ಹಿಡಿದಂತಹ ಆಸ್ತಿ ಎಂದರೆ ಸರಿಯಲ್ಲ ಅದು ಒಟ್ಟು ಕುಟುಂಬದ ಆಸ್ತಿಯಿಂದ ಹಿಡಿದಂತಹ ಆಸ್ತಿ ಎನ್ನುತ್ತಾರೆ. ಸದರಿ ಆಸ್ತಿ ನನ್ನ ಮಾವನ ಸ್ವ ಸಂಪಾದಿತ ಆಸ್ತಿ ಎಂಬುದು ನನಗೆ ಗೊತ್ತಿದ್ದರೂ ಕೂಡಾ ನನ್ನ ಕೇಸಗೆ ಅನುಕೂಲವಾಗಲೆಂದು ನಾನು ಅದು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ನಿಮ್ಮ ಮಾವನವರು ಆಸ್ಪತ್ರೆಗೆ ದಾಖಲಾಗಿ 2009 ರಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ ಆದಂತಹ ದಾಖಲೆ ಎಂದರೆ ಸಾಕ್ಷಿ ಅವರು ನನಗೇನೂ ತೋರಿಸಿಲ್ಲ ಆದ ಕಾರಣ ಆ ದಾಖಲೆ ಬಗ್ಗೆ ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. 2011 ರಲ್ಲಿ ಮತ್ತೇ ಅವರು ಅನಾರೋಗ್ಯಕ್ಕೆ ತುತ್ತಾಗಿ ಮತ್ತೇ ಆಸ್ಪತ್ರೆಗೆ ದಾಖಲಾದರು ಎಂದರೆ ಸಾಕ್ಷಿ ಅದು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಒಂದು ಸ್ಕಲ್ಲ ಆಪರೇಶನ ಅಗಬೇಕೆಂದರೆ ಅಂದಾಜು 10 ಲಕ್ಷ ರೂ ಬೇಕಾಗುತ್ತದೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ಮಾವನವರ ನಿವೃತ್ತಿಯಿಂದ ಬಂದಂತಹ ಹಣ ಅವರ ಆಸ್ಪತ್ರೆಯ ಖರ್ಚಿಗೆ ಸಾಲದೇ ಅದರ ಮೇಲೆ ಅವರು ಸಾಲ ಕೂಡಾ ಮಾಡಿರುತ್ತಾರೇಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ಖಾಯಂ ವಿಳಾಸ ಬದಾಮಿ ಎಂದರೆ ಸರಿ. ದಾವಾ 2 ನೇ ಆಸ್ತಿಯಲ್ಲಿ ಪ್ರತಿವಾದಿ 2 ರವರು ಕಬ್ಜೆಯಲ್ಲಿರುತ್ತಾರೆಂದರೆ ಸಾಕ್ಷಿ ಅದು ಪ್ರತಿವಾದಿ 2 ರವರ ಹೆಸರಿನಲ್ಲಿದೆ ಎನ್ನುತ್ತಾರೆ. ಅದೇ ರೀತಿ ದಾವಾ 3 ನೇ ಆಸ್ತಿ ನನ್ನ ಯಜಮಾನರ ಕಬ್ಜಾದಲ್ಲಿದೆ ಎಂದರ ಸರಿ. ದಾವಾ ಆಸ್ತಿ 1 ರಲ್ಲಿ ಪ್ರತಿವಾದಿ 1 ರಿಂದ 4 ರವರು ಕಬ್ಜಾದಲ್ಲಿದ್ದಾರೆಂದರೆ ಸರಿ. ನಾನು ದಾವಾ ಆಸ್ತಿಯ ಸ್ವಾದೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ 4 ರವರು ಪ್ರತಿವಾದಿ 1 ರವರಿಗಿಂತ ದೊಡ್ಡವರೆಂದರೆ ಸಾಕ್ಷಿ ಅವರಿಬ್ಬರು ಅವಳಿ ಜವಳಿ ಮಕ್ಕಳು ಎನ್ನುತ್ತಾರೆ. 1 ನೇ ಪ್ರತಿವಾದಿ ಮನೆಯ ಕರ್ತಾನಾಗಿ ಎದು ಮನೆ ನಿರ್ವಹಿಸಿಲ್ಲ ಎಂದರೆ ಸಾಕ್ಷಿ ಎಲ್ಲರೂ ಜಂಟಿಯಾಗಿ ನಿರ್ವಹಿಸುತ್ತಿದ್ದರು ಎನ್ನುತ್ತಾರೆ. ದಾವಾ ಆಸ್ತಿ 1 ರಲ್ಲಿ ನಾನು ಮದುವೆಯಾಗುವದಕ್ಕಿಂತ ಮೊದಲೇ ಪ್ರತಿವಾದಿ 1 ರಿಂದ 4 ರವರ ಹೆಸರಿನಲ್ಲಿ ಮುಟೇಶನ ಆಗಿ ಅವರು ಕಬ್ಜಾದಲ್ಲಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ದಾವಾ 2 ರ

ಆಸ್ತಿ ಪ್ರತಿವಾದಿ 2 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಮಾವ ದಾವಾ 2 ಮತ್ತು 3 ನೇ ಆಸ್ತಿ ಖರೀದಿ ಹಿಡಿಯಲು ಯಾವದೇ ರೀತಿಯ ವೈಯಕ್ತಿಕವಾಗಿ ಹಣದ ಸಹಾಯ ಮಾಡಿಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಅದನ್ನು ಖರೀದಿ ಹಿಡಿಯಲಾಗಿದೆ ಎನ್ನುತ್ತಾರೆ. ದಾವಾ ನಂಃ3 ರ ಆಸ್ತಿ ಮೇಲೆ ಇವತ್ತಿಗೂ ಬ್ಯಾಂಕ ಸಾಲ ಇದ್ದು ಅದನ್ನು ಪ್ರತಿವಾದಿಯರು ತುಂಬುತ್ತಿದ್ದಾರೆಂದರೆ ನನಗೆ ಮಾಹಿತಿ ಇಲ್ಲ. ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದ್ದರೂ ಕೂಡಾ ಮಾಹಿತಿ ಇಲ್ಲ ಎಂದು ಸುಳ್ಳು ಸೃಷ್ಟಿ ಮಾಡಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 2018 ನೇ ಸಾಲಿನಲ್ಲಿ ನನ್ನ ಯಜಮಾನರಾದ ಪ್ರತಿವಾದಿ 1 ರವರು ಬಿಟ್ಟು ಹೋಗಿದ್ದಾರೇಂದು ಹೇಳಿದ್ದು ಆ ನಂತರ ನಾನು ಅವರ ವಿರುದ್ದ ಜೀವನಾಂಶದ ಕೇಸು ದಾಖಲಿಸಿದ್ದೆ ಎಂದರೆ ಸರಿ. ಆ ನಂತರ 1 ನೇ ಪ್ರತಿವಾದಿ ನನಗೆ ಜೀವನ ಮಾಡಲು ಬರಬೇಕೆಂದು ಕೇಸು ದಾಖಲಿಸಿದ್ದರು ಎಂದರ ಸಾಕ್ಷಿ ನೋಟೀಸು ಕೊಟ್ಟಿದ್ದರು ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ನನಗಾಗಲಿ ನನ್ನ ಮಗನಿಗಾಗಲಿ ಯಾವದೇ ರೀತಿಯ ಹಕ್ಕು ಇಲ್ಲದಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಿ ಈ ದಾವಾ ಹಾಕಿರುತ್ತೇನೆಂದರೆ ಸರಿಯಲ್ಲ. ದಾವಾ ನಂಃ3 ರ ಆಸ್ತಿಯು ಪ್ರತಿವಾದಿ 1 ರವರು ಸ್ವಸಂಪಾದಿತ ಆಸ್ತಿಯಾಗಿರುವ ಕಾರಣ ಅದರಲ್ಲಿ ಕೂಡಾ ನನಗೂ ನನ್ನ ಮಗನಿಗೂ ಯಾವದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಹಕ್ಕು ಇದೆ ಎನ್ನುತ್ತಾರೆ. ದಾವಾ ಸಂಖ್ಯೆ 1 ರ ಆಸ್ತಿಯು ನನ್ನ ಮಾವನವರ ಸ್ವಂತ ಆಸಿತಯಾದ ಕಾರಣ ಅದರಲ್ಲೂ ಕೂಡಾ ನನಗೆ ಯಾವದೇ ರೀತಿಯ ಹಕ್ಕು ಇಲ್ಲ ಎಂದರೆ ಸಸಾಕ್ಷಿ ಅದು ಸ್ವಂತ ಆಸ್ತಿ ಅಲ್ಲ ಒಟ್ಟು ಕುಟುಂಬದ ಆಸ್ತಿ ಆ ಕಾರಣಕ್ಕೆ ಹಕ್ಕು ಇದೆ ಎನ್ನುತ್ತಾರೆ. ಪ್ರತಿವಾದಿಯರಿಗೆ ಜಂಟಿ ಕುಟುಂಬದ ನಾತೆಯಿಂದ ಯಾವದೇ ರೀತಿಯ ಆದಾಯ ಇಲ್ಲದಿದ್ದರೂ ನಾನು ಈ ಕೆಸೀಗೆ ಅನುಕೂಲವಾಗಲೆಂದು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂಃ1 ರವರ ಜೊತೆ ಜೀವನ ನಡಸದೇ ಕೇವಲ ಅವರ ಆಸ್ತಿ ದೋಚಬೇಕೆಂಬ ಉದ್ದಶದಿಂದ ಉದ್ದೇಶಪೂರ್ವಕವಾಗಿ ನಾನು ಈ ಸುಳ್ಳು ದಾವಾ ಹಾಕಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**